## ನಿಮ್ಮೊಡನೆ

# ಲಂಚದ ಭೂತದ ಅಸಂಖ್ಯ ಮುಖ

> ಏಷ್ಯಾ ಖಂಡದಲ್ಲಿಯೇ ಭಾರತದಲ್ಲಿ ಲಂಚದ ಪ್ರಮಾಣ ಅಧಿಕ ಎಂದು ವರದಿ ಹೇಳಿದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ದಿನನಿತ್ಯ ಅನುಭವಕ್ಕೆ ಬರುವ ಈ ವಿಷಯಕ್ಕೆ ಸಮೀಕ್ಷೆಗಳ ಪುರಾವೆ ಏಕೆ? ಈ ವರದಿಯಲ್ಲಿನ ಇನ್ನೊಂದು ಅಂಶ ಮತ್ತೂ ಕಳವಳಕಾರಿ.

ಭ್ರಷ್ಟಾಚಾರಕ್ಕೆ ಅಸಂಖ್ಯ ಮುಖ. ಅದರ ಆಳ–ಅಗಲ ಬಲ್ಲವರಿಲ್ಲ. ಅದರ ಅಸಂಖ್ಯ ಮುಖಗಳನ್ನು ಎಣಿಸಲಾಗಲೀ ವರ್ಗೀಕರಿಸಲಾಗಲೀ ಸಾಧ್ಯವಿಲ್ಲ. ಅದರಿಂದಾಗುವ ಅಪಾಯಗಳೂ ಅಷ್ಟೇ– ಇಂತಿಷ್ಟೇ ಎಂದು ಹೇಳಲಾಗದು. ಅಷ್ಟೊಂದು ಸಂಕೀರ್ಣವಾದ ಪಿಡುಗಿದು! ಸಮಾಜದ ಎಲ್ಲ ಸ್ತರಗಳನ್ನೂ ಹೊಕ್ಕಿದೆ. ಅಂಕೆ ಮೀರಿ ಬೆಳೆದಿದೆ. ಅದರ ವಿರುದ್ಧ ಹೋರಾಟಗಳಾಗಿವೆ. ನಿಗ್ರಹಿಸಲು ಕಾಯ್ದೆ– ಕಾನೂನುಗಳು ರೂಪುಗೊಂಡಿವೆ. ಪತ್ತೆ ಹಚ್ಚಲು ಪಡೆಗಳಿವೆ, ಸಾಂಸ್ಥಿಕ ವ್ಯವಸ್ಥೆ ಇದೆ. ಆದರೂ ನಿಯಂತ್ರಿಸಲಾಗಿಲ್ಲ.

ಅಧಿಕಾರಿಗಳು ಬದಲಾದರು. ಆಳುವ ಪಕ್ಷಗಳು ಬದಲಾದವು. ಲಂಚಗುಳಿತನ ಮಾತ್ರ ಹಾಗೆಯೇ ಇದೆ. ಹೊಸ ಹೊಸ ವೇಷ ತೊಟ್ಟು ಸಭ್ಯ ಸಮಾಜವನ್ನು ಅಣಕಿಸುತ್ತಿದೆ. ಹಾಗಾದರೆ ಈ ಪಿಡುಗಿಗೆ ಕೊನೆ ಎಂಬುದು ಇಲ್ಲವೇ? ಇದೆಯೋ ಇಲ್ಲವೋ, ಈ ಕ್ಷಣಕ್ಕೆ ಕಣ್ನೋಟಕ್ಕೆ ನಿಲುಕುತ್ತಿಲ್ಲ ಎಂಬುದು ತಥ್ಯ.

ಜನರ ಸೇವೆಗೆಂದು ನೇಮಕಗೊಂಡಿರುವ ನೌಕರರ–ಅಧಿಕಾರಿಗಳ ಕಿಸೆಗಳನ್ನು ಪ್ರತೀ ದಿನ ತಲಾಶ್ ಮಾಡಿದರೂ, ಅವರ ಮನೆಗಳ ಮೇಲೆ ತಿಂಗಳಿಗೊಮ್ಮೆ ದಾಳಿ ನಡೆಸಿದರೂ, ಅವರ ಆಸ್ತಿಪಾಸ್ತಿ ವಿವರಗಳನ್ನು ವರ್ಷಕ್ಕೊಮ್ಮೆ ತರಿಸಿಕೊಂಡರೂ ಭ್ರಷ್ಟರಾದವರು, ಲಂಚ ಪಡೆಯಲು ಹೊಸ ಬಗೆಯ ದಾರಿಗಳನ್ನು ಕಂಡುಕೊಳ್ಳಬಲ್ಲರು. ಕಾನೂನುಗಳಿದ್ದರೂ ಕಳ್ಳಕಿಂಡಿಗಳನ್ನು ಶೋಧಿಸುವುದರಲ್ಲಿ ನಿಸ್ಸೀಮರಿವರು. ಶಾಸನ ರೂಪಿಸುವ ಜನಪ್ರತಿನಿಧಿಗಳಲ್ಲಿ ಹೆಚ್ಚಿನವರು ಜನರಿಗೆ ಧನದಾಹಿಗಳಂತೆ ಕಾಣತೊಡಗಿದರೆ ಅದು ಅವರ ತಪ್ಪು ಅಲ್ಲ. ರಾಜಕಾರಣ ಎಂಬುದು ಹೆಚ್ಚಿನವರಿಗೆ ಹಣ ಬಿತ್ತಿ, ಹಣ ಬೆಳೆಯುವ ದಂಧೆಯಾಗಿ ಮಾರ್ಪಟ್ಟಿರುವುದೇ ಇದಕ್ಕೆ ಮುಖ್ಯ ಕಾರಣ.

ಹಾಗಾಗಿಯೇ ಲಂಚಗುಳಿತನಕ್ಕೆ ಸಂಬಂಧಿಸಿದಂತೆ ಯಾವುದೇ ಸಮೀಕ್ಷೆ ಹೊರಬಿದ್ದರೂ ಆ ಯಾದಿಯಲ್ಲಿ ಭಾರತದ ಸ್ಥಾನ ಸದಾ ಮೇಲಿರುತ್ತದೆ. ಭ್ರಷ್ಟಾಚಾರ ಸ್ವರೂಪದ ಮೇಲಿನ ಕಣ್ಗಾವಲು ಸಂಸ್ಥೆ 'ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್', ಸರ್ಕಾರಿ ಸೇವೆ ಪಡೆಯುವುದಕ್ಕೆ ಸಂಬಂಧಿಸಿದಂತೆ ಈಚೆಗೆ ನಡೆಸಿದ ಸಮೀಕ್ಷೆಯಲ್ಲೂ ಇದೇ ಅಂಶ ಮತ್ತೊಮ್ಮೆ ದೃಢಪಟ್ಟಿದೆ. ಏಷ್ಯಾ ಖಂಡದಲ್ಲಿಯೇ ಭಾರತದಲ್ಲಿ ಲಂಚದ ಪ್ರಮಾಣ ಅಧಿಕ ಎಂದು ವರದಿ ಹೇಳಿದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಕೇ? ದಿನನಿತ್ಯ ಅನುಭವಕ್ಕೆ ಬರುವ ಈ ವಿಷಯಕ್ಕೆ ಸಮೀಕ್ಷೆಗಳ ಪುರಾವೆ ಏಕೆ? ಈ ವರದಿಯಲ್ಲಿನ ಇನ್ನೊಂದು ಅಂಶ ಮತ್ತೂ ಕಳವಳಕಾರಿ. ಭ್ರಷ್ಟಾಚಾರ ಪ್ರಕರಣಗಳನ್ನು ತಡೆಯಲು ದೂರು ನೀಡುವುದು ಅಗತ್ಯವೆನಿಸಿದರೂ ಹಾಗೆ ದೂರು ನೀಡಿದರೆ ಪ್ರತಿಕೂಲ ಪರಿಣಾಮಗಳಿಗೆ ಒಳಗಾಗಬೇಕಾದೀತು ಎಂಬ ಹೆದರಿಕೆಯು ಹೆಚ್ಚಿನವರಲ್ಲಿ ಇರುವುದನ್ನು ವರದಿ ತೆರೆದಿಟ್ಟಿದೆ. ಭ್ರಷ್ಟಾಚಾರದ ಮತ್ತೊಂದು ಭೀಕರ ಮಗ್ಗುಲು ಇದರಿಂದ ಅನಾವರಣಗೊಂಡಂತಾಗಿದೆ.

ಲಂಚ ಕೊಡುವುದು ಅನಿವಾರ್ಯ ಎಂಬ ಮನಃಸ್ಥಿತಿಯನ್ನು ನಾವು ವ್ಯವಸ್ಥಿತವಾಗಿ ನೆಲೆಗೊಳಿಸಿದ್ದೇವೆ. ಆ ದಿಸೆಯಲ್ಲಿ ಒಂದು ಪರ್ಯಾಯ ವ್ಯವಸ್ಥೆಯನ್ನೇ ಕಟ್ಟಿದ್ದೇವೆ. ದುಡ್ಡಿದ್ದರೆ ಇಲ್ಲಿ ಎಲ್ಲವೂ ಸಾಧ್ಯ. ಹಣ ತೆತ್ತು ನೌಕರಿ ಖರೀದಿಸಬಹುದು, ಶಾಲೆ–ಕಾಲೇಜುಗಳಲ್ಲಿ ಸೀಟು ಪಡೆಯಬಹುದು. ನೋಟು ಕೊಟ್ಟರೆ ವೋಟು ಬರುತ್ತದೆ. ಶಾಸಕರು ಕೂಡ ಇಲ್ಲಿ ಬಿಕರಿಗೆ ಉಂಟು ಎಂಬಂತಹ ಸ್ಥಿತಿ ಇದೆ. ಅದಕ್ಕಾಗಿ ಹೇಗಾದರೂ ಹಣ ಗಳಿಸಬೇಕು. ಹಣ ಇದ್ದರೆ ಸಾಮಾಜಿಕ ಗೌರವ ತಾನಾಗಿಯೇ ಬರುತ್ತದೆ ಎಂಬ ವಾತಾವರಣವನ್ನು ಸೃಷ್ಟಿಸಿದ್ದೇವೆ. ಇದಕ್ಕೆ ಗೊತ್ತಿದ್ದೋ ಇಲ್ಲದೆಯೋ ಪ್ರತಿಯೊಬ್ಬರೂ ತಮ್ಮ ಪಾಲಿನ ಕೊಡುಗೆ ನೀಡಿದ್ದಾರೆ.

ಭ್ರಷ್ಟಾಚಾರದ ವಿರುದ್ಧ ಅಣ್ಣಾ ಹಜಾರೆ ಅವರು ಹೋರಾಟ ನಡೆಸಿದರು. ಲೋಕಪಾಲ, ಲೋಕಾಯುಕ್ತರು ನೇಮಕಗೊಂಡರು. 'ಕನಿಷ್ಠ ಸರ್ಕಾರ, ಗರಿಷ್ಠ ಆಡಳಿತ' ಎಂಬುದು ಸರ್ಕಾರದ ಧ್ಯೇಯವಾಕ್ಯವಾಯಿತು. ತಳಮಟ್ಟದಲ್ಲಿ ಪರಿಸ್ಥಿತಿ ಏನಾದರೂ ಸುಧಾರಿಸಿದೆಯೇ? ಚುನಾವಣೆ ವೆಚ್ಚ ನಿಜದ ನೆಲೆಯಲ್ಲಿ ಕಿಂಚಿತ್ತಾದರೂ ಕಡಿಮೆ ಆಗಿದೆಯೇ? ಮತದಾರರಿಗೆ ಆಮಿಷ ಒಡ್ಡುವುದು ನಿಂತಿದೆಯೇ? ಇದಕ್ಕೆ ಯಾವ ರಾಜಕೀಯ ಪಕ್ಷವೂ ಹೊರತಲ್ಲ. ಶಿಕ್ಷಕರ ಕ್ಷೇತ್ರ, ಪದವೀಧರರ ಕ್ಷೇತ್ರಗಳಿಗೆ ನಡೆಯುವ ಚುನಾವಣೆಯಲ್ಲೂ ಹಣ ಹಂಚುವ ಪರಿಪಾಟ ನಿಂತಿಲ್ಲ.

ಚುನಾವಣೆ ವ್ಯವಸ್ಥೆ ಭ್ರಷ್ಟಗೊಂಡಿದೆ. ನೇಮಕಾತಿ ವ್ಯವಸ್ಥೆಯು ಅದಕ್ಕಿಂತಲೂ ಭ್ರಷ್ಟಗೊಂಡಿದೆ. ಶಾಸನ ರೂಪಿಸುವ ಮತ್ತು ಆಡಳಿತಕ್ಕೆ ನೌಕರ ವರ್ಗವನ್ನು ಆರಿಸುವ ವ್ಯವಸ್ಥೆಗಳೇ ಹಾದಿ ತಪ್ಪಿರುವಾಗ ಶುದ್ಧ ಆಡಳಿತ ಎಂಬುದು ಮರೀಚಿಕೆಯೇ ಸರಿ. ಇದರಿಂದ ತೊಂದರೆಗೆ ಒಳಗಾಗುತ್ತಿರುವ ಜನಸಮೂಹ ಕೂಡ ಅಸಹಾಯಕವಾಗಿದೆ. ಜನರ ಮನೋಧರ್ಮ ಮತ್ತು ನಮ್ಮ ಕಾಯಕ ಸಂಸ್ಕೃತಿ ಬದಲಾಗದ ಹೊರತು ಈ ಪಿಡುಗಿಗೆ ಕಡಿವಾಣ ಕಷ್ಟಸಾಧ್ಯ.


ಈಶ್ವರ್

■ ಎನ್. ಉದಯಕುಮಾರ್